## ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\2128\2018\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:20/02/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ಸಣ್ಣ ನೀರಾವರಿ ಇಲಾಖೆ ಉಪವಿಭಾಗದ ಪ್ರಭಾರ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಎ.ಆರ್.ಆಲೂರು ರವರ ವಿರುದ್ಧದ ದುರ್ನಡತೆ ಬಗ್ಗೆ.

******

ಧಾರವಾಡ ಜಿಲ್ಲೆ ಟಿಕಾರೆ ರಸ್ತೆ ಹನುಮಾನ್ ಸಂಕೀರ್ಣ ಭೂಗತ ಪ್ರಪಂಚ ಪತ್ರಿಕೆಯ ಸಂಪಾದಕಾರದ ಶ್ರೀ.ಬಸವರಾಜ ಆನೇಗುಂದಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ಸಣ್ಣ ನೀರಾವರಿ ಇಲಾಖೆ ಉಪವಿಭಾಗದ 1) ಪ್ರಭಾರ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಎ.ಆರ್.ಆಲೂರು ಮತ್ತು 2) ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಮಹಮ್ಮದ್ ರಫೀಖ್ (ಇನ್ನು ಮುಂದೆ, '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಧಾರವಾಡ ಸಣ್ಣ ನೀರಾವರಿ ಇಲಾಖೆ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 1ನೇ ಎದುರುದಾರರು ಸುಮಾರು 15 ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸುಮಾರು ₹50 ಕೋಟಿ ಅವ್ಯವಹಾರ ಮಾಡಿದ್ದಾರೆ, ಹಾಗೂ 2ನೇ ಎದುರುದಾರರು 20 ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಹೆಚ್ಚು ಪ್ರವಾಸ ಭತ್ಯೆಯನ್ನು ಪಡೆಯುತ್ತಿದ್ದಾರೆ, ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಂಡು, ಅಕ್ರಮ ಆಸ್ತಿಗಳನ್ನು ಮಾಡಿದ್ದಾರೆ. 1ನೇ ಎದುರುದಾರರು ಧಾರವಾಡದ ಕೇಶ್ವಾ ನಗರದಲ್ಲಿ ಸುಮಾರು ಒಂದು ಕೋಟಿ ಎಂಬತ್ತು ಲಕ್ಷ ಬೆಲೆ ಬಾಳುವ ಬಂಗಲೆ ಹೊಂದಿದ್ದಲ್ಲದೆ, ಸರ್ಕಾರದ ಅನುದಾನದ ಹಣವನ್ನು ಹಾಗೂ ಬಂಗಾರ, ಬೆಳ್ಳಿ ಮತ್ತು ಬೆಲೆ ಬಾಳುವ ವಸ್ತುಗಳನ್ನು ಹೊಂದಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

1) ಎ, ಬಿ, ಸಿ ಮತ್ತು ಡಿ ಎಂದು ಗುರುತಿಸಿದ ಕಟ್ಟಡ ಇರುವ ಜಾಗ (4.25 ಗುಂಟೆ) ವನ್ನು ತಮ್ಮ ತಾತ 1972ರಲ್ಲಿ ಖರೀದಿಸಿದ್ದು, ಸದರಿಯವರು ಕೆನರಾ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರಾಗಿದ್ದಾರೆ. ಎ ಮತ್ತು ಬಿ ಮನೆ ಕಟ್ಟಡವನ್ನು ತಮ್ಮ ತಾತ 1972ರಲ್ಲಿ ನಿರ್ಮಾಣ ಮಾಡಿದ್ದು, ತಮ್ಮ ಚಿಕ್ಕಪ್ಪ ಮತ್ತು ತಮ್ಮ ಮಧ್ಯೆ ಆದ ಭಾಗದಲ್ಲಿ ಬಿ–ಭಾಗದ ಮನೆಯು ತಮ್ಮ ಭಾಗಕ್ಕೆ ಬಂದಿದೆ. ಸದರಿ ಮನೆಗೆ ಮೊದಲನೇ ಮಹಡಿ (ಸಿ–ಭಾಗ) ಅನ್ನು 1996ನೇ ಇಸವಿಯಲ್ಲಿ ತಮ್ಮ ತಾಯಿಗೆ ಬರುತ್ತಿದ್ದ ಪಿಂಚಣಿ ಮತ್ತು ತಮ್ಮ ತಾತ ನೀಡಿದ ಹಣದಿಂದ ಕಟ್ಟಿಸಲಾಗಿದೆ. ತಮ್ಮ ಚಿಕ್ಕಪ್ಪ ರವರು ಕೂಡ 1996ನೇ ಇಸವಿಯಲ್ಲಿ ಅವರ ಭಾಗವಾದ ಎ–ಭಾಗದ ಮನೆಗೆ ಮೊದಲನೇ ಮಹಡಿ (ಡಿ–ಭಾಗ) ಅನ್ನು ನಿರ್ಮಿಸಿದ್ದಾರೆ. ತಮ್ಮ ಚಿಕ್ಕಪ್ಪ ಬೇರೆ ಮನೆಗೆ ತಮ್ಮ ವಾಸ ಸ್ಥಾನವನ್ನು ಬದಲಿಸಲು ಉದ್ದೇಶಿಸಿದ್ದರಿಂದ, ಅವರ ಭಾಗದ ಮನೆ (ಭಾಗ–ಎ & ಡಿ) ಅನ್ನು ತಾವು ದಿನಾಂಕ:16/03/13ರ ಕ್ರಯಪತ್ರದಡಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯೊಂದಿಗೆ ₹38ಲಕ್ಷಗಳಿಗೆ ಖರೀದಿಸಿದ್ದರಿಂದ ಭಾಗ–ಎ ಯಿಂದ ಡಿ ಮನೆಗೆ ತಾವು ಮಾಲೀಕರಾಗಿದ್ದೇವೆ;

2) ಮುಂದುವರೆದು, ತಾವು ದಿನಾಂಕ:14/06/1990ರಂದು ಅನುಕಂಪದ ಆಧಾರದ ಮೇಲೆ ರೋಣ ಉಪವಿಭಾಗ ಕಿರಿಯ ಅಭಿಯಂತರರಾಗಿ ನೇಮಕಗೊಂಡು 1995ರವರೆಗೆ ಅಲ್ಲಿ ಕಾರ್ಯನಿರ್ವಹಿಸಿ, 1996ನೇ ಇಸವಿಯಲ್ಲಿ ಮಲಪ್ರಭಾ ಯೋಜನೆ, ನವಿಲು ತೀರ್ಥ ಇಲ್ಲಿ ಕರ್ತವ್ಯ ನಿರ್ವಹಿಸಿ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಉಪವಿಭಾಗದಲ್ಲಿ 1996 ರಿಂದ 2006ರವರೆಗೆ ಹಾಗೂ 2006 ರಿಂದ 2007ರವರೆಗೆ ನಿಯೋಜನೆ ಮೇರೆಗೆ ಹಿಡಕಲ್ ಅಣೆಕಟ್ಟು, 2007 ರಿಂದ 2010 ರವರೆಗೆ ಧಾರವಾಡ ಸಣ್ಣ ನೀರಾವರಿ ಉಪವಿಭಾಗದಲ್ಲಿ, 2010 ರಿಂದ 2013 ರವರೆಗೆ ಗದಗ ಉಪವಿಭಾಗದಲ್ಲಿ ಮತ್ತು 2013 ರಿಂದ 2014 ರವರೆಗೆ ಗದಗ ದಲ್ಲಿ ಕರ್ತವ್ಯ ನಿರ್ವಹಿಸಿ, 2016ನೇ ಇಸವಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಪದೋನ್ನತಿ ಪಡೆದು ಧಾರವಾಡ ಸಣ್ಣ ನೀರಾವರಿ ಉಪವಿಭಾಗದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ತಾವು ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸರ್ಕಾರದ ಅನುದಾನವು ತಮ್ಮ ಕಛೇರಿಗೆ ನೇರವಾಗಿ ಸ್ವೀಕೃತವಾಗುವುದಿಲ್ಲ. ಕಾನೂನು ರೀತ್ಯಾ ಟೆಂಡರ್ ಪ್ರಕ್ರಿಯೆ ಜರುಗಿಸಿ, ಕಾಮಗಾರಿಗಳು ಅನುಷ್ಟಾನಗೊಳ್ಳುವುದರಿಂದ, ಅನುದಾನದ ಹಣವನ್ನು ದುರ್ಬಳಕೆ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ತಾವು ಹೊಂದಿರುವ ಸ್ಥಿರ ಮತ್ತು ಚರ ಸ್ವತ್ತುಗಳ ವಿವರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವ ಆಸ್ತಿ ಮತ್ತು ಹೊಣೆಗಾರಿಕೆ ತಃಖ್ತೆಯಲ್ಲಿ ಕಾಲಕಾಲಕ್ಕೆ ತೋರಿಸುತ್ತಿದ್ದು, ಕಾರಣ ದೂರಿನ ಆಪಾದನೆ ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

BSM/2128/18



ತಾವು ಸಣ್ಣ ನೀರಾವರಿ ಇಲಾಖೆಗೆ ದಿನಾಂಕ:15/09/97ರಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಗೊಂಡು ಪ್ರಸ್ತುತ ಸಣ್ಣ ನೀರಾವರಿ ಉಪ ವಿಭಾಗ, ಧಾರವಾಡ ದಲ್ಲಿ ದಿನಾಂಕ:23/07/15 ರಿಂದ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದು, 27 ವರ್ಷಗಳ ಸೇವೆಯಲ್ಲಿ ಯಾವುದೇ ಅಕ್ರಮ ಆಸ್ತಿ ಗಳಿಸಿಲ್ಲ, ಕಾರಣ ದೂರಿನ ಆಪಾದನೆಗಳು ಸುಳ್ಳು ಎಂದು ಹೇಳಿದ್ದಾರೆ.

---

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಧಾರವಾಡ ತಾಲ್ಲೂಕ್ ಸಪ್ತಾಪುರ ಗ್ರಾಮದ ಸರ್ವೆ ನಂ.71/ಎ ರಲ್ಲಿ ಒಟ್ಟು 4.25 ಗುಂಟೆ ವಿಸ್ತೀರ್ಣದ ನಿವೇಶನ 1ನೇ ಎದುರುದಾರರು ಮತ್ತು ಅವರ ಚಿಕ್ಕಪ್ಪ ಶ್ರೀ.ಮೋಹನ ಬಾಬುರಾವ್ ಆಲೂರು ರವರ ಜಂಟಿ ಹೆಸರಿನಲ್ಲಿ ದಸ್ತಾವೇಜು ಸಂಖ್ಯೆ:500/1972–73ರಲ್ಲಿ ಖರೀದಿಯಾಗಿದೆಯೆಂದು 1ನೇ ಎದುರುದಾರರು ಹಾಜರುಪಡಿಸಿರುವ ಋಣಭಾರ ಪ್ರಮಾಣ ಪತ್ರದಲ್ಲಿ (01/04/1972 ರಿಂದ 31/03/1973) ಕಂಡು ಬಂದಿದೆ. ಸದರಿ ಖರೀದಿ ಸಮಯಕ್ಕೆ 1ನೇ ಎದುರುದಾರರು ಅಲ್ಪ ವಯಸ್ಕರಾಗಿದ್ದರೆಂದು ಕಂಡು ಬಂದಿದೆ. ಸದರಿ ಕ್ರಯದಂತೆ 1ನೇ ಎದುರುದಾರರು ಮತ್ತು ಶ್ರೀ.ಮೋಹನ ಬಾಬುರಾವ್ ಆಲೂರು ರವರ ಜಂಟಿ ಹೆಸರಿನಲ್ಲಿ ಪಹಣಿ ಆಗಿದೆ. ಸದರಿ ಸ್ವತ್ತಿನಲ್ಲಿ ಶ್ರೀ.ಮೋಹನ ಬಾಬುರಾವ್ ಆಲೂರು ರವರ ಹಿಸ್ಸೆಯನ್ನು 1ನೇ ಎದುರುದಾರರು ದಿನಾಂಕ:16/02/13ರ ನೋಂದಾಯಿತ ಕ್ರಯ ಪತ್ರ ಸಂಖ್ಯೆ:9192ರಲ್ಲಿ ₹38 ಲಕ್ಷಗಳಿಗೆ ಖರೀದಿಸಿದ್ದಾರೆ. ಸದರಿ ಸ್ವತ್ತನ್ನು ಖರೀದಿಸುವ ಬಾಬ್ತು ಅನುಮತಿ ಕೋರಿ 1ನೇ ಎದುರುದಾರರು ದಿನಾಂಕ:25/03/13ರಂದು ಮುಖ್ಯ ಅಭಿಯಂತರರು, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರಿಗೆ ಪತ್ರ ಬರೆದಿದ್ದು, ದಿನಾಂಕ:14/06/13ರಂದು ಸದರಿಯವರಿಂದ ಅನುಮತಿ ಬಂದಿದೆ. ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯುವ ಮೊದಲೇ 1ನೇ ಎದುರುದಾರರು ಸ್ಥಿರ ಸ್ವತ್ತನ್ನು ಖರೀದಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದ್ದು, ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966ರ ನಿಯಮ 23(2) ಅನ್ನು ಉಲ್ಲಂಘಿಸಿದಂತಾಗಿದೆ;

2) 1ನೇ ಎದುರುದಾರರು ತಮ್ಮ ಭಾಗದ ಮನೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಧಾರವಾಡಕ್ಕೆ ಅಡಮಾನವಿರಿಸಿ ₹29,90,000/– ಸಾಲ, ತಮ್ಮ ತಾಯಿ ಮತ್ತು ಪತ್ನಿಯ ಹೆಸರಿನಲ್ಲಿ

ಕೆನರಾ ಬ್ಯಾಂಕ್, ಧಾರವಾಡ \ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಿರೇಪೇಠ, ಹುಬ್ಬಳ್ಳಿ ಇಲ್ಲಿ ಇಟ್ಟಿರುವ ₹4 ಲಕ್ಷ ಠೇವಣಿ ಮತ್ತು ಬಂಗಾರ ಮಾರಿದ ಹಣ ₹7.50 ಲಕ್ಷಗಳನ್ನು ಕ್ರೋಢೀಕರಿಸಿ ಸದರಿ ಕ್ರಯದ ಬಾಬ್ತು ಆದಾಯದ ಮೂಲ ತಮಗಿದೆ ಎಂದು 1ನೇ ಎದುರುದಾರರು ಮುಖ್ಯ ಅಭಿಯಂತರರು, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರಿಗೆ ಬರೆದ ದಿನಾಂಕ:25/03/13ರ ಪತ್ರದಲ್ಲಿ ಹೇಳಿರುವುದು ಕಂಡು ಬಂದಿದ್ದು, ಮನೆಯನ್ನು ಅಡಮಾನವಿರಿಸಿ ₹29,90,000/- ಸಾಲವನ್ನು ಪಡೆಯುವ ಪೂರ್ವದಲ್ಲಿ 1ನೇ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ದಾಖಲೆಯಿಲ್ಲ. ಕಾರಣ, 1ನೇ ಎದುರುದಾರರು ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966ರ ನಿಯಮ 23(2) ಅನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

3) ಕೆನರಾ ಬ್ಯಾಂಕ್, ಧಾರವಾಡ \ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಿರೇಪೇಠ, ಹುಬ್ಬಳ್ಳಿ ಇಲ್ಲಿ ತಮ್ಮ ತಾಯಿ ಮತ್ತು ಪತ್ನಿಯ ಹೆಸರಿನಲ್ಲಿದ್ದ ₹4 ಲಕ್ಷ ಠೇವಣಿ ಮತ್ತು ₹7.50 ಲಕ್ಷ ಮೌಲ್ಯದ ಬಂಗಾರದ ಬಗ್ಗೆ 1ನೇ ಎದುರುದಾರರು ಸೂಚಿತ ಪ್ರಾಧಿಕಾರಕ್ಕೆ ಘೋಷಿಸಿಕೊಂಡ ದಾಖಲೆಯಿಲ್ಲ ಮತ್ತು ಸದರಿ ಠೇವಣಿ ಮತ್ತು ಬಂಗಾರದ ಮೂಲದ ಬಗ್ಗೆ ದಾಖಲೆಯಿಲ್ಲ. ಕಾರಣ, 1ನೇ ಎದುರುದಾರರು ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966ರ ನಿಯಮ 23(3) ಅನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ 1ನೇ ಎದುರುದಾರರ ದುರ್ನಡತೆಯು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಎರಡನೇ (2ನೇ) ಎದುರುದಾರರು ಅಕ್ರಮ ಆಸ್ತಿಗಳನ್ನು ಮಾಡಿದ್ದಾರೆಂಬ ಅಂಶಕ್ಕೆ ಪೂರಕವಾಗಿ ಯಾವುದೇ ಅಂಶಗಳು ಕಡತ ಪರಿಶೀಲನೆಯಲ್ಲಿ ಕಂಡು ಬಾರದ ಕಾರಣ, 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

B6m/2128/18



9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ, 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand
20/2

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

2012